ಒಂದೆಡೆ ಚಿಕ್ಕ ಮಕ್ಕಳ ಮೇಲೆ ನಡೆಯುತ್ತಿರುವ ಪೈಶಾಚಿಕ ದೌರ್ಜನ್ಯಗಳು, ಇನ್ನೊಂದೆಡೆ ಉಂಡಾಡುವ ವಯೋಮಾನದ ಬಾಲಕಿಯರು ಅಮ್ಮನಾಗುವ ಹೊರೆಗೆ ಬೆನ್ನು ಕೊಡುತ್ತಿದ್ದಾರೆ. ಮತ್ತೊಂದೆಡೆ ಹರೆಯಕ್ಕೂ ಮುಂಚೆಯೇ ಚಿಕ್ಕ ಮಕ್ಕಳು ಸಹಮತದ ಸಮ್ಮಿಲನಕ್ಕೆ ಜಾರುತ್ತಿದ್ದಾರೆ. ಇದು ಅನೇಕ ಮಾನಸಿಕ, ದೈಹಿಕ, ಕೌಟುಂಬಿಕ, ಆರ್ಥಿಕ ಹಾಗೂ ಸಾಮಾಜಿಕ ಕ್ಲೇಷಗಳಿಗೆ, ಸಂಘರ್ಷಗಳಿಗೆ ಕಾರಣವಾಗುತ್ತಿದೆ. ಇಂಥ ಸಂದಿಗ್ಧ ಕಾಲದಲ್ಲಿ ಮಕ್ಕಳಿಗೆ ಒದಗಿಸಬೇಕಾಗಿರುವ ಲೈಂಗಿಕ ಶಿಕ್ಷಣ ಹಾಗೂ ಅದರ ರೂಪುರೇಷೆಯ ಬಗ್ಗೆ ಚರ್ಚಿಸಲೇಬೇಕಾದ ಅಗತ್ಯವೆದ್ದಿದೆ. ಚಿಕ್ಕ ವಯಸ್ಸಿನಿಂದಲೇ ಮಕ್ಕಳಿಗೆ ಲೈಂಗಿಕ ಶಿಕ್ಷಣ ನೀಡಬೇಕು ಎಂದು ಸುಪ್ರೀಂ ಕೋರ್ಟ್ ಕೂಡ ಒತ್ತಿ ಹೇಳಿದೆ. ಈ ಹಿನ್ನೆಲೆಯಲ್ಲಿ ಲೈಂಗಿಕ ಶಿಕ್ಷಣದ ಚರ್ಚೆಗೀಗ ಮರುಜೀವ ಬಂದಿದೆ.

■ ಸುಶೀಲಾ ಡೋಣೂರ

# ಬಾಡದಿರಲು ಚಿಣ್ಣರ ಹೂಮನ ನೀಡಿ ಲೈಂಗಿಕ ಶಿಕ್ಷಣ

